ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

AU – 4J Part – IVA	ಬೆಂಗಳೂರು, ಸೋಮವಾರ, 08, ಮಾರ್ಚ್, 2021 (ಫಾಲ್ಗುಣ, 17, ಶಕವರ್ಷ, ೧೯೪2) BENGALURU, MONDAY, 08, MARCH, 2021 (Phalguna, 17, SHAKAVARSHA, 1942)	ನಂ. 230 No. 230

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 25 ಶಾಸನ 2017, ದಿನಾಂಕ: 08 .03.2021

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕ, 2020 ಇದಕ್ಕೆ 2021ರ ಮಾರ್ಚ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ:10 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2021 ರ ಕರ್ನಾಟಕ ಅಧಿನಿಯಮ ಸಂಖ್ಯೆ:10

(2021 ರ ಮಾರ್ಚ್ ತಿಂಗಳ 8ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2020

(2021 ರ ಮಾರ್ಚ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2009ನ್ನು (2010ರ ಕರ್ನಾಟಕ ಅಧಿನಿಯಮ ಸಂಖ್ಯೆ 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 12ನೇ ಪ್ರಕರಣದ ತಿದ್ದುಪಡಿ.- ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2009ರ (2010ರ ಕರ್ನಾಟಕ ಅಧಿನಿಯಮ ಸಂಖ್ಯೆ 11) 12ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾಲಯದ ಕುಲಪತಿ	- ಅಧ್ಯಕ್ಷರು
(ii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ಅಥವಾ ಜಂಟಿ ಕಾರ್ಯದರ್ಶಿ ಹುದ್ದೆಗೆ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತರು	- ಸದಸ್ಯ
(iii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಥವಾ ಜಂಟಿ ಕಾರ್ಯದರ್ಶಿ ಹುದ್ದೆಗೆ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತರು	- ಸದಸ್ಯ
(iv) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಕೃಷಿ ಇಲಾಖೆ ಅಥವಾ ವಿಶ್ವವಿದ್ಯಾನಿಲಯದಲ್ಲಿನ ಬೋಧನಾ ಮತ್ತು ಸಂಶೋಧನಾ ಕಾರ್ಯಕ್ರಮವನ್ನು ದೃಷ್ಟಿಯಲ್ಲಿರಿಸಿಕೊಂಡು ಸರ್ಕಾರವು ನಾಮನಿರ್ದೇಶಿಸಬಹುದಾದ ಜಂಟಿ ಕಾರ್ಯದರ್ಶಿ ಹುದ್ದೆಗೆ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತರು	- ಸದಸ್ಯ
(V) ಪ್ರೊಫೆಸರ್ ದರ್ಜೆಗೆ ಕಡಿಮೆಯಲ್ಲದ ದರ್ಜೆಯ, ರಾಜ್ಯ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಥವಾ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನಲ್ಲಿ ಕನಿಷ್ಠ ಹತ್ತು ವರ್ಷಗಳ ಅನುಭವದೊಂದಿಗೆ ಯಾವುದೇ ಶೈಕ್ಷಣಿಕ ಸಂಸ್ಥೆಯ ವ್ಯವಸ್ಥಾಪನಾ ಮಂಡಳಿಯಲ್ಲಿ ಅಥವಾ ವಿಶ್ವವಿದ್ಯಾನಿಲಯದ ಸಂಶೋಧನಾ ಅಥವಾ ಸಲಹಾ ಅಥವಾ ಸಂಚಾಲನಾ ಅಥವಾ ತಜ್ಞರ ಸಮಿತಿಗಳ ಅಥವಾ ಪರಿಷತ್ತುಗಳ ಸದಸ್ಯರಾಗಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿದ ಅನುಭವವಿರುವ, ಕುಲಾಧಿಪತಿಯವರು ನಾಮನಿರ್ದೇಶಿಸಿದ ಒಬ್ಬ ಶ್ರೇಷ್ಠ ಶಿಕ್ಷಣ ತಜ್ಞ ಮತ್ತು ವಿದ್ಯಾಪರಿಣಿತ (academician)	- ಸದಸ್ಯ

(vi) ಸರ್ಕಾರವು ನಾಮನಿರ್ದೇಶಿಸಿದ ರಾಜ್ಯ ವಿಧಾನ ಸಭೆಯ ಒಬ್ಬ ಪ್ರತಿನಿಧಿ ಮತ್ತು ರಾಜ್ಯ ವಿಧಾನ ಪರಿಷತ್ತಿನ ಒಬ್ಬ ಪ್ರತಿನಿಧಿ	- ಸದಸ್ಯ
(vii) ಕನಿಷ್ಠ ಐದು ವರ್ಷಗಳ ಅವಧಿಗಾಗಿ ಗ್ರಾಮೀಣಾಭಿವೃದ್ಧಿ ಅಥವಾ ಲಿಂಗಾಧಾರಿತ ವಿಷಯಗಳಲ್ಲಿ ಕಾರ್ಯನಿರ್ವಹಿಸಿದ ಹಾಗೂ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಅಥವಾ ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ, ಲಾಭದಾಯಕ ಉದ್ಯೋಗ, ಗ್ರಾಮೀಣ ಆರೋಗ್ಯ, ಶಿಕ್ಷಣ, ನೈರ್ಮಲ್ಯ ಇಂಥ ಸಾಮಾಜಿಕ ಕಾರಣಗಳಿಗಾಗಿ ರಾಜ್ಯ ಅಥವಾ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಯನ್ನು ಪಡೆದಿರುವ ಕುಲಾಧಿಪತಿಯವರು ನಾಮನಿರ್ದೇಶಿಸಿದ ಒಬ್ಬ ಅಸಾಧಾರಣ ಮಹಿಳಾ ಸಮಾಜಿಕ ಕಾರ್ಯಕರ್ತೆ.	- ಸದಸ್ಯ
(viii) ಕರ್ನಾಟಕ ರಾಜ್ಯದಲ್ಲಿ ಕೃಷಿ ಭೂಮಿಯ ಒಡೆತನವಿರುವ ಮತ್ತು ಕೃಷಿ ಕ್ಷೇತ್ರಗಳಲ್ಲಿ ಮತ್ತು ಸಂಬಂಧಿತ ವಲಯಗಳಲ್ಲಿ ಶ್ರೇಷ್ಠತೆಗಾಗಿ ರಾಜ್ಯ ಅಥವಾ ಕೇಂದ್ರ ಅಥವಾ ಅಂತರರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದಿರುವ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಒಬ್ಬ ಪ್ರಗತಿಪರ ರೈತ.	- ಸದಸ್ಯ
(ix) ಕನಿಷ್ಠ ಐದು ಕೋಟಿಗಳ ವಾರ್ಷಿಕ ವಹಿವಾಟು ಹೊಂದಿರುವ ಯಾವುದೇ ಕೃಷಿ ಸಂಸ್ಕರಣಾ ಕೈಗಾರಿಕೆಯ ವ್ಯವಸ್ಥಾಪನಾ ವೃಂದದಲ್ಲಿ ಅಥವಾ ಕೃಷಿ ಮತ್ತು ಸಂಬಂಧಿತ ಉತ್ಪನ್ನಗಳ ಮೌಲ್ಯ ಸಂವರ್ಧನೆಯಲ್ಲಿ ಹತ್ತು ವರ್ಷಗಳ ಅನುಭವವುಳ್ಳ ಮತ್ತು ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಯಿಂದ ಕೃಷಿ-ಸಂಸ್ಕರಣೆ ಅಥವಾ ಮೌಲ್ಯ ಸಂವರ್ಧನೆ ಬಗೆಗಿನ ಪರಿಣಿತಿಗಾಗಿ ಪ್ರಶಸ್ತಿಯನ್ನು ಪಡೆದಿರುವ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಕೃಷಿ-ಕೈಗಾರಿಕೆಯ ಒಡೆತನವನ್ನು ಹೊಂದಿರುವ ಒಬ್ಬರು ಹೆಸರುವಾಸಿಯಾಗಿರುವ ಕೃಷಿ ಉದ್ಯಮಿ.	- ಸದಸ್ಯ
(x) ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಮಹಾ ನಿರ್ದೇಶಕರು ನಾಮನಿರ್ದೇಶನ ಮಾಡಿದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ (ಐಸಿಎಆರ್) ಒಬ್ಬ ಪ್ರತಿನಿಧಿ.	- ಸದಸ್ಯ
(xi) ಕುಲಪತಿಯವರು ನಾಮನಿರ್ದೇಶಿಸಿದ ಒಬ್ಬ ನಿರ್ದೇಶಕ.	- ಸದಸ್ಯ

(xii)	ಕುಲಪತಿಯವರು ನಾಮನಿರ್ದೇಶಿಸಿದ ಒಬ್ಬ ಡೀನ್.	- ಸದಸ್ಯ
(xiii)	ವಿಶ್ವವಿದ್ಯಾನಿಲಯದ ಕುಲಸಚಿವರು.	- ಸದಸ್ಯ ಕಾರ್ಯದರ್ಶಿ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

DEPARTMENT OF PARLIAMENTARY AFFAIRS AND LEGISLATION SECRETARIAT

NOTIFICATION

NO. DPAL 25 SHASANA 2017, BENGALURU, DATED: 08.03.2021

ಭಾರತ ಸಂವಿಧಾನದ ಅನುಚ್ಛೇದ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2020 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 10) ನ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO 10 OF 2021

(First published in the Karnataka Gazette Extra-ordinary on the 8th day of March, 2021)

THE UNIVERSITY OF HORTICULTURAL SCIENCES (AMENDMENT) ACT, 2020

(Received the assent of the Governor on the 5th day of March, 2021)

An Act further to amend the University of Horticultural Sciences Act, 2009.

Whereas it is expedient further to amend the University of Horticultural Sciences Act, 2009 (Karnataka Act 11 of 2010) for the purposes hereinafter appearing;

Be it enacted by the Karnataka State Legislature in the seventy first year of the Republic of India, as follows:-

1. Short title and commencement.- (1) This Act may be called the University of Horticultural Sciences (Amendment) Act, 2020.

(2) It shall come into force at once.

2. Amendment of section 12.- In the University of Horticultural Sciences Act, 2009 (Karnataka Act 11 of 2010), in section 12, for sub-section (2), the following shall be substituted, namely:-

"(2) The Board of Management shall consist of the following, namely:-

(i)	The Vice-Chancellor of the University.	- Chairperson
(ii)	The Additional Chief Secretary or Principal Secretary or Secretary to Government, Department of Horticulture or his nominee not below the rank of Joint Secretary.	- Member
(iii)	The Additional Chief Secretary or Principal Secretary or Secretary to Government, Finance Department or his nominee not below the rank of Joint Secretary.	- Member
(iv)	The Additional Chief Secretary or Principal Secretary or Secretary to Government incharge of the Department of Agriculture or his nominee not below the rank of Joint Secretary, as may be nominated by the Government keeping in view the teaching and research programme at the University.	- Member
(v)	One eminent educationist and academician of not less than rank of professor with a minimum ten years experience in State Agricultural Universities or Indian Council of Agricultural Research with minimum of three years experience of having served in the Board of Management of any educational institution or as a member of Research or Advisory or Steering or Expert Committees or Councils of a university nominated by the chancellor.	- Member
(vi)	One representative of the State Legislative Assembly and one representative of the State Legislative Council to be nominated by the Government.	- Member
(vii)	One outstanding women social worker nominated by the Chancellor, who has worked on	- Member

	issues of rural development or Gender related issues for a minimum period five years and must have been awarded State or National or international level award in the areas of agriculture and allied sectors or Rural development, women empowerment, social causes such as gainful employment, rural health, Education, sanitation.		
(viii)	One progressive Farmer owning agricultural land in Karnataka and who has been conferred with a reputed State or Central or International level award for excellence in the areas of Agriculture and allied sectors nominated by the state Government.	-	Member
(ix)	One distinguished Agriculture entrepreneur owning Agro-Industry with an experience of ten years in the managerial cadre of any agro-processing industry or value addition in Agricultural and related products having a minimum annual turnover of five crores. And an awardee for excellence in Agro-processing or value addition by Karnataka Government or Central Government organization to be nominated by the state Government.	-	Member
(x)	One representative from the Indian Council of Agricultural Research (ICAR) to be nominated by the Director General, Indian Council of Agricultural Research.	-	Member
(xi)	One Director to be nominated by the Vice-Chancellor.	-	Member
(xii)	One Dean to be nominated by the Vice-Chancellor.	-	Member

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

(xiii) Registrar of the University. - Member Secretary

The above translation of ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2020 (2021 ರ ಕರ್ನಾಟಕ ಅಧಿನಿಯಮ ಸಂಖ್ಯೆ:10) shall be the authoritative text in the English language under by clause (3) of Article 348 of the Constitution of India.

VAJUBHAI VALA
GOVERNOR OF KARNATAKA

By Order and in the name of
the Governor of Karnataka,

(K. DWARAKANATH BABU)
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE Digitally signed by SUNIL GARDE Date: 2021.03.08 18:10:27 +05'30'